ಪ್ರಶ್ನೋತ್ತರಗಳು

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಸೋಮವಾರಪೇಟೆ ತಾಲ್ಲೂಕಿನ ಮಾದಾಪುರದಲ್ಲಿ ಪೋಲೀಸ್ ಠಾಣೆಯ ಪ್ರಾರಂಭ.

392 - ಶ್ರೀ ಎಂ.ಪಿ. ಅಪ್ಪಚ್ಚುರಂಜನ್ (ಸೋಮವಾರಪೇಟೆ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸೋಮವಾರಪೇಟೆ ತಾಲ್ಲೂಕಿನ ಮಾದಾಪುರದಲ್ಲಿ ಆರಕ್ಷಕ ಠಾಣೆ ತೆಗೆಯುವ ಉದ್ದೇಶವಿದೆಯೇ?*

ಆ) *ಮಾದಾಪುರದಲ್ಲಿ ಮೊಕದ್ದಮೆಗಳು ಹೆಚ್ಚಿರುವುದರಿಂದ ಮತ್ತು ಸೋಮವಾರಪೇಟೆ ಆರಕ್ಷಕ ಠಾಣೆಗೂ ಹಾಗೂ ಸುಂಟಿಕೊಪ್ಪ ಆರಕ್ಷಕ ಠಾಣೆಗೂ ತುಂಬಾ ದೂರ ಇರುವುದರಿಂದ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ*

ಇ) *ಬಂದಿದ್ದಲ್ಲಿ, ಯಾವಾಗ ಆರಕ್ಷಕ ಠಾಣೆಯನ್ನು ತೆರೆಯಲಾಗುವುದದು?*

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಇಲ್ಲ.

ಆ) ಇಲ್ಲ, ಮಾದಾಪುರದಲ್ಲಿ ಈಗಾಗಲೇ ಹೊರ ಪೋಲೀಸ್ ಠಾಣೆ ಕರ್ತವ್ಯ ನಿರ್ವಹಿಸುತ್ತಿದ

ಇ) ಉದ್ಭವಿಸುವುದಿಲ್ಲ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ : ಮಾನ್ಯ ಉಪಾಧ್ಯಕ್ಷರೆ, ನಾನು ಸೋಮವಾರ ಪೇಟೆ ತಾಲ್ಲೂಕಿನ ಮಾದಾಪುರದಲ್ಲಿ ಆರಕ್ಷಕ ಠಾಣೆ ತೆಗೆಯುವ ಉದ್ದೇಶವಿದೆಯೇ ಎಂದು ಕೇಳಿದ್ದ ಪ್ರಶ್ನೆಗೆ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಮಾದಾಪುರದಲ್ಲಿ ಮೊಕ್ಕದ್ದಮೆಗಳು ಹೆಚ್ಚಿರುವುದರಿಂದ ಮತ್ತು ಸೋಮವಾರಪೇಟೆ ಆರಕ್ಷಕ ಠಾಣೆಗೂ ಹಾಗೂ ಶುಂಟಿಕೊಪ್ಪ ಆರಕ್ಷಕ ಠಾಣೆಗೂ ತುಂಬಾ ದೂರ ಇರುವುದರಿಂದ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಇಲ್ಲ, ಮಾದಾಪುರದಲ್ಲಿ ಈಗಾಗಲೇ ಹೊರ ಪೋಲೀಸ್ ಠಾಣೆ ಕರ್ತವ್ಯ ನಿರ್ವಹಿಸುತ್ತಿದೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ಸೋಮವಾರ ಪೇಟೆ ತಾಲ್ಲೂಕಿನ ಮಾದಾಪುರ ಗ್ರಾಮದಲ್ಲಿ ಒಂದು ವರ್ಷದಿಂದೀಚೆಗೆ ಎಷ್ಟು ಕೊಲೆಗಳು, ದರೋಡೆಗಳು ಆಗಿವೆ ಎಂದು ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಹಾಗೆಯೇ ಅಲ್ಲಿ ಹೆಚ್ಚು ಕೊಲೆಗಳು ದರೋಡೆಗಳು ಆಗುವುದರಿಂದ ಅಲ್ಲಿ ಒಂದು ಠಾಣೆ ಆಗಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಆರ್. ರೋಷನ್ ಬೇಗ್ : ಮಾನ್ಯ ಉಪಾಧ್ಯಕ್ಷರೆ, ಒಂದು ಪೋಲೀಸ್ ಸ್ಟೇಷನ್ ತೆರೆಯಬೇಕಾದರೆ ನ್ಯಾಷನಲ್ ಪೋಲೀಸ್ ಕಮೀಷನ್ ಶಿಫಾರಸ್ಸಿನ ಪ್ರಕಾರ ಮಿನಿಮಮ್ ಪಾಪ್ಯುಲೇಷನ್

ಆರವತ್ತು ಸಾವಿರ ಇರಬೇಕು. ಹಾಗೂ ಅಲ್ಲಿ ಸಫಿಶಿಯಂಟ್ ಕೇಸಸ್ ಆಫ್ ಕ್ರೈಮ್ ರಿಪೋರ್ಟ್ ಆಗಬೇಕು. ಆದರೆ ಮಾದಾಪುರದಲ್ಲಿ ಈಗಾಗಲೇ ಹೊರ ಪೋಲೀಸ್ ಠಾಣೆ ಕರ್ತವ್ಯ ನಿರ್ವಹಿಸುತ್ತಿದೆ. ಅದು ಸರಿ ಇದೆ. ಅಲ್ಲಿ ಹೆಚ್ಚು ಕ್ರೈಮ್ ರಿಪೋರ್ಟ್‌ಗಳು ಬರಲಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು 1992-93ನೇ ಸಾಲಿನ ಕ್ರೈಮ್ ರಿಪೋರ್ಟ್ ಕೇಳಿದ್ದಾರೆ. ಅದನ್ನು ನಾಳೆ ಬೆಳಿಗ್ಗೆ ಅವರಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ : ಅಲ್ಲಿ ಕಡಿಮೆ ಕೇಸಸ್ ದಾಖಲೆಯಾಗಿದೆ ಎಂದು ಹೇಳುತ್ತಿದ್ದಾರೆ. ನನಗೆ ಗೊತ್ತಿದ್ದ ಹಾಗೆ ಕಳೆದ ಒಂದು ವರ್ಷದಲ್ಲೇ ಐದು ಕೊಲೆಗಳು ಆಗಿದೆ. ಮತ್ತು ಅದರ ಜೊತೆಗೆ ಗಾಂಜಾ ಬೆಳೆಸುವುದೂ ಕೂಡ ಮಾದಾಪುರದಲ್ಲಿ ನಡೆಯುತ್ತಿದೆ. ಮಾದಾಪುರ ಹೊರವಲಯ ಠಾಣೆಯಲ್ಲಿ ಒಬ್ಬರು ಹೆಡ್ ಕಾನ್ಸ್‌ಟೇಬಲ್ ಮತ್ತು ಎರಡು ಪೋಲೀಸ್ ಕಾನ್ಸ್‌ಟೇಬಲ್ ಇದ್ದಾರೆ. ಆದಕಾರಣ ಅಲ್ಲಿ ಒಂದು ಠಾಣೆಯನ್ನು ತೆರೆಯಬೇಕೆಂದು ಮಾನ್ಯ ಮಂತ್ರಿಗಳನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಆರ್. ರೋಷನ್ ಬೇಗ್ : ನಾನು ಬೆಳಿಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಹಾಗೂ ಮಾನ್ಯ ಸದಸ್ಯರನ್ನು ನನ್ನ ಕಛೇರಿಗೆ ಕರೆಯಿಸಿ ಅದರ ಬಗ್ಗೆ ಚರ್ಚೆ ಮಾಡುತ್ತೇನೆ. ಆ ತರಹ ಅಲ್ಲಿ ಆಗಿದ್ದರೆ, ಅವರು ಬೇಕೇ ಬೇಕು ಎಂದರೆ ಅವರ ರಿಕ್ವೆಸ್ಟ್ ಕನ್ಸಿಡರ್ ಮಾಡುತ್ತೇನೆ.

ಹಾಸನದಲ್ಲಿ ಹೊಸ ಜಿಲ್ಲಾ ಕಾರಾಗೃಹ

393 - ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಕಾರಾಗೃಹ, ಗೃಹ ರಕ್ಷಕ ದಳ ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನದ ಜಿಲ್ಲಾ ಕಾರಾಗೃಹದ ತುಂಬಾ ಚಿಕ್ಕದಾಗಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಬದಲಿ ವ್ಯವಸ್ಥೆಗೆ ಏನಾದರೂ ಕ್ರಮ ಕೈಗೊಳ್ಳಲಾಗಿದೆಯೇ?

ಶ್ರೀ ವಿ. ಸೋಮಣ್ಣ (ಕಾರಾಗೃಹ, ಗೃಹ ರಕ್ಷಕ ದಳ ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು) :

ಅ) ಹೌದು

ಆ) ಹೊಸ ಕಾರಾಗೃಹವನ್ನು ನಿರ್ಮಿಸಲು ಪರಿಶೀಲಿಸಲಾಗುತ್ತಿದೆ.

ಶ್ರೀ ಬಿ.ಬಿ. ಶಿವಪ್ಪ : ಸನ್ಮಾನ್ಯ ಉಪಾಧ್ಯಕ್ಷರೆ, ಉತ್ತರವನ್ನೇನೋ ಒದಗಿಸಿದ್ದಾರೆ. ಹೊಸ ಕಾರಾಗೃಹವನ್ನು ನಿರ್ಮಿಸಲು ಪರಿಶೀಲಿಸಲಾಗುತ್ತಿದೆ ಎಂದು ಹೇಳಿದ್ದಾರೆ. ನನ್ನದು ಮೂರು ಉಪ ಪ್ರಶ್ನೆಗಳು ಇವೆ. ಪರಿಶೀಲನೆ ಯಾವ ಹಂತದಲ್ಲಿ ಇದೆ? ಯಾವ ಯಾವ ವಿಷಯಗಳಲ್ಲಿ ಪರಿಶೀಲನೆ ನಡೆಯುತ್ತಿದೆ? ಪರಿಶೀಲನೆ ಎಷ್ಟು ವರ್ಷದಲ್ಲಿ ಮುಗಿಯಬಹುದು?